ಬಾಗಲಕೋಟೆ ಜಿಲ್ಲೆಯ ಸಿರೂರು ಗ್ರಾಮದ **ಲಕ್ಷ್ಮಣ ಬದಾಮಿ** ಸರ್ಕಾರಿ ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರು. ರೇಖೆ–ಬಣ್ಣಗಳ ಮೂಲಕ ಚಿತ್ರ ಬಿಡಿಸುವಷ್ಟೇ ಸಲೀಸಾಗಿ ಕಥೆ–ಪ್ರಬಂಧಗಳನ್ನೂ ಚಿತ್ರಕಲೆಯ ಸೂಕ್ಷ್ಮಗಳ ಕುರಿತೂ ಬರೆಯಬಲ್ಲವರು. ಸಾಹಿತ್ಯಿಕ ಸಾಂಸ್ಕೃತಿಕ ಸಂಘಟನೆಯಲ್ಲಿ ನಿರತರು. 'ಭವ', 'ಬೇರು ಮತ್ತು ಬೆವರು', 'ಒಂದು ಚಿಟಿಕೆ ಮಣ್ಣು' ಪ್ರಕಟಿತ ಕಥಾಸಂಕಲನಗಳು. 'ರೂಪ ನಿರೂಪ' ಚಿತ್ರಕಲೆಯ ಕುರಿತ ಕೃತಿ. 'ಮನುಷ್ಯರು ಬೇಕಾಗಿದ್ದಾರೆ' ಕವನಸಂಕಲನ.

ಅದರಲ್ಲೂ ವಿಶೇಷವಾಗಿ ಹೆಂಡತಿಯೂ ಸಹ ಗಂಡನನ್ನು ಹೆಸರಿಡಿದು ಕರೆಯುವುದನ್ನು ನಾನು ಕಂಡಿದ್ದೇನೆ. ಇದು ಸಮಾನಧರ್ಮದ ಹೆಗ್ಗುರುತಾಗಿ ನನಗೆ ಕಾಣಿಸುತ್ತದೆ.

ಏಕವಚನ-ಬಹುವಚನ, ಈ ಎರಡರಲ್ಲಿ ಏಕವಚನ ಕನಿಷ್ಠವೆಂದೂ, ಬಹುವಚನ ಶ್ರೇಷ್ಠವೆಂದು ಬಿಂಬಿತವಾಗಿದೆ. ಒಮ್ಮೆ ಬಸ್ಸಿನಲ್ಲಿ ಸೀಟಿನ ಸಲುವಾಗಿ ಇಬ್ಬರು ಪ್ರಯಾಣಿಕರ ನಡುವೆ ವಾಗ್ವಾದ ಶುರುವಾಯಿತು. ಆರಂಭದಲ್ಲಿ ಇಬ್ಬರ ನಡುವೆ ಬಹುವಚನದಲ್ಲಿಯೇ ವಾದ ನಡೆಯುತ್ತಿತ್ತು. ಆವೇಶದಲ್ಲಿ ಒಬ್ಬನು ಏಕವಚನದಲ್ಲಿ ನುಡಿದುಬಿಟ್ಟ! ಅದು ಇನ್ನೊಬ್ಬನಿಗೆ ತೀವ್ರ ಕೋಪ ತರಿಸಿ, 'ನೋಡು, ಸಿಂಗಲ್ ವರ್ಡ್ ಎಲ್ಲಾ ಯೂಸ್ ಮಾಡ್ಬೇಡ. ನಾನು ಶುರು ಮಾಡಿದ್ರೆ ಆಮೇಲೆ ಮರ್ಯಾದೆ ಇರೋದಿಲ್ಲ...' ಅಂತ ತಾಕೀತು ಮಾಡಿದ. ಸಿಂಗಲ್ ವರ್ಡ್ ಇಲ್ಲಿ ಕೀಳರಿಮೆಯನ್ನು ಮೂಡಿಸಿದರೆ, ಇನ್ನು ಕೆಲವು ಸಂದರ್ಭಗಳಲ್ಲಿ ಈ ಏಕವಚನ ಪದ ಪ್ರಯೋಗವಾಗದಿದ್ದರೆ ಆಳರಿಮೆಯ ಕೊರತೆಯನ್ನು ಸೂಚಿಸುತ್ತದೆ. ಅಂದರೆ ದೀರ್ಘಕಾಲದವರೆಗೂ ಒಡನಾಡಿಗಳಾಗಿದ್ದ ಇಬ್ಬರು ವ್ಯಕ್ತಿಗಳು ಸಮಾನಮನಸ್ಕರು, ಸಮಾನವಯಸ್ಕರು ಆಗಿದ್ದಾಗಲೂ, ಅವರ ನಡುವೆ ಏಕವಚನವಿನ್ನೂ ಆರಂಭವಾಗಿಲ್ಲವೆಂದರೆ ಅವರಲ್ಲಿರುವ ಅನ್ಯೋನ್ಯತೆಯ ಕೊರತೆಯನ್ನು ತೋರಿಸುತ್ತದೆ. ಅಂದಮೇಲೆ ಬಹುವಚನವಷ್ಟೇ ಶ್ರೇಷ್ಠವಲ್ಲ ಎಂದಂತಾಯಿತು. ಬಹುವಚನದಲ್ಲಿ ಗೌರವಾರ್ಥ ಇರುವಂತೆಯೇ ಅಪರಿಚಿತತೆಯ ತೊಡಕೂ ಇರುತ್ತದೆ. ಏಕವಚನದ ನಂಟಿನಲ್ಲಿ ಅಪರಿಚಿತತೆಯಾಗಲಿ, ಯಾವುದೇ ಸಂಕೋಚ, ಮುಜುಗರವಾಗಲಿ ಇರುವುದಿಲ್ಲ. ಇದು ಸಲುಗೆಯ ಜೊತೆಗೆ ಪ್ರೀತಿಯನ್ನು ತೋರಿಸುತ್ತದೆ.

ನಾನು ಮೊದಲ ಬಾರಿಗೆ ಬಹುವಚನದಿಂದ ಕರೆಯಿಸಿಕೊಂಡಾಗ ವಿಚಿತ್ರ ಖುಷಿಯನ್ನು ಅನುಭವಿಸಿದ್ದೆ. ಪ್ರೌಢಶಿಕ್ಷಣ ಮುಗಿಸಿ ಕಾಲೇಜಿಗೆ ಕಾಲಿಟ್ಟಾಗ ಅಲ್ಲಿಯ ಕೆಲವು ಉಪನ್ಯಾಸಕರು ವಿದ್ಯಾರ್ಥಿಗಳಾದ ನಮ್ಮನ್ನು 'ಏನ್ರೀ... ನೀವ್... ನೀವು, ಹೇಳರಿ ಉತ್ತರ...' ಅಂತ ಬೆರಳು ಮಾಡಿ ತೋರಿಸುತ್ತಿದ್ದರು. ಹಿಂದೆ ಹೈಸ್ಕೂಲು, ಪ್ರೈಮರಿ ಶಾಲೆಗಳಲ್ಲಿ ಕಂಡ್ಡಂಗ್ ಕರೆಸಿಕೊಂಡಿದ್ದ ನಮಗೆ ಈ ಬಹುವಚನದ ಸಂಬೋಧನೆ ನಾವು ದೊಡ್ಡವರಾಗಿದ್ದೇವೆ ಎಂಬ ಅನುಭವವನ್ನು ಮೂಡಿಸಿತ್ತು. ಇದೇ ಬಹುವಚನ ನನ್ನನ್ನು ಇಕ್ಕಟ್ಟಿಗೂ, ಮುಜುಗರಕ್ಕೂ ಈಡು ಮಾಡಿತ್ತು. ನಾನು ಶಿಕ್ಷಕನಾಗಿ ವೃತ್ತಿಗೆ ಸೇರಿದ ಮೇಲೆ ಭೇಟಿಯಾಗೋಣವೆಂದು ಪ್ರೌಢಶಾಲೆಯ ನನ್ನ ವಿದ್ಯಾಗುರುಗಳ ಮನೆಗೆ ಹೋದೊಡನೆ ಅವರು 'ಬರ್ರೀ ಸರ್...' ಅಂದು ದಿಗ್ಭ್ರಾಂತಿ ಮೂಡಿಸಿದರು! ನನಗೆ ಭಯಂಕರ ಮುಜುಗರವಾಗಿ 'ಸರ್ ಹಿಂಗನ್ನಬ್ಯಾಡರಿ... ನಾನು ಯಾವತ್ತಿಗೂ ನಿಮ್ಮ ವಿದ್ಯಾರ್ಥಿ, ನೀವು ನಮ್ಮ ಗುರುಗಳು. ಮೊದಲಿನಂಗ್ ನನ್ನ ಹೆಸರಿಡಿದು ಕರಿಬೇಕು' ಅಂದೆ. ಅದಕ್ಕವರು 'ನೀವೀಗ ವಿದ್ಯಾರ್ಥಿ ಅಲ್ಲಲ್ಲ. ಶಿಕ್ಷಕರು. ಅದಕ್ಕ ಗೌರವ ಕೊಡಬೇಕಲ್ಲ' ಎಂದರು. 'ಸರ್... ನಾನು ನನ್ನ ಸಾಲ್ಯಾಗಷ್ಟ ಶಿಕ್ಷಕ; ನಿಮ್ಮ ಮುಂದ್ ಯಾವೊತ್ತೂ ವಿದ್ಯಾರ್ಥಿನೇ' ಅಂತಂದರೂ ಕೇಳಲಿಲ್ಲ. ತಮ್ಮ ಬಹುವಚನವನ್ನ ಮುಂದುರೆಸಿದರು. ನಾನೂ ಅವರ ಮುಂದೆ ನನ್ನ ವಿದ್ಯಾರ್ಥಿತನವನ್ನು ಸಾಬೀತುಪಡಿಸುವುದಕ್ಕೂ, ನನಗೆ ತಿಳಿಯದ ವಿಷಯಗಳ ಕುರಿತು ಮಾತಾಡೋಣವೆಂದು ಫೋನ್ ಮಾಡುತ್ತಿದ್ದಂತೆ 'ಹೇಳ್ರಿ ಸರ್ರಾಆಆ...' ಅಂದು ಬಿಡುತ್ತಾರೆ.

ವ್ಯಕ್ತಿಗಳು ಅವರೇ ಇದ್ದರೂ ಈ ವಚನಗಳು ಕಾಲಧರ್ಮಕ್ಕನುಗುಣವಾಗಿ, ಸಂದರ್ಭಕ್ಕನುಸಾರವಾಗಿ